ವೆಚ್ಚ, ನಿರ್ವಹಣೆ, ದುರಸ್ತಿ ವೆಚ್ಚ ಹಾಗೂ ಇದರ ಮೇಲಿನ ವರ್ಷಾವಾರು ಬಡ್ಡಿ ಇತ್ಯಾದಿ ವಸೂಲಾಗುವವರೆಗೆ ಮುಂದುವರೆಸಲಾಗುವುದು. ಹಾಗೂ ಈ ಅಧಿಸೂಚನೆಯಂತೆ ಸ್ಥಳೀಯರಿಗೆ ಶುಲ್ಕ ವಿನಾಯಿತಿ ಇರುವುದಿಲ್ಲ.

543(733) : ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಔರಾದ್ ತಾಲ್ಲೂಕಿನಲ್ಲಿ ಈಗ ಕಾರ್ಯನಿರ್ವಹಿಸುತ್ತಿರುವ 33 ಕೆ.ವಿ. ಮತ್ತು 110 ಕೆ.ವಿ. ಠಾಣೆಗಳ ಸಂಖ್ಯೆ ಎಷ್ಟು;

ಆ) ಈ-ತಾಲ್ಲೂಕಿನಲ್ಲಿ ವಿದ್ಯುತ್ ತೊಂದರೆಯನ್ನು ತಪ್ಪಿಸಲು ಯಾವ ಯಾವ ಸ್ಥಳಗಳಲ್ಲಿ ಹೊಸ ವಿದ್ಯುತ್ ಠಾಣೆ ಮತ್ತು ಉಪ ಠಾಣೆಗಳನ್ನು ಸ್ಥಾಪಿಸುವ ಬಗ್ಗೆ ಪ್ರಸ್ತಾವನೆ ಸರ್ಕಾರದ ಮುಂದೆ ಇದೆ;

ಇ) ಇವುಗಳ ಸಾಮರ್ಥ್ಯವೆಷ್ಟು;

ಈ) ಎಷ್ಟು ವಿದ್ಯುತ್ ಠಾಣೆಗಳ ಸ್ಥಾಪನಾಕಾರ್ಯ ಪ್ರಗತಿಯಲ್ಲಿದೆ (ಗ್ರಾಮವಾರು ವಿವರಗಳನ್ನು ಒದಗಿಸುವುದು);

ಉ) ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜಿನಲ್ಲಿ ಉಂಟಾಗುತ್ತಿರುವ ವ್ಯತ್ಯಯವನ್ನು ತಪ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಔರಾದ್ ತಾಲ್ಲೂಕಿನಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ 33 ಕೆ.ವಿ. ವಿದ್ಯುತ್ ಉಪ ಕೇಂದ್ರಗಳ ಸಂಖ್ಯೆ–3. ಈ ತಾಲ್ಲೂಕಿನಲ್ಲಿ ಪ್ರಸ್ತುತ ಯಾವುದೇ 110 ಕೆ.ವಿ. ವಿದ್ಯುತ್ ಕೇಂದ್ರವು ಇರುವುದಿಲ್ಲ.

ಆ) ಆ ಮತ್ತು ಇ

ಔರಾದ್ ತಾಲ್ಲೂಕಿನಲ್ಲಿ ಹೊಸ ವಿದ್ಯುತ್ ಉಪ ಕೇಂದ್ರಗಳನ್ನು ಸ್ಥಾಪಿಸುವ ಮತ್ತು ಹಾಲಿ ಇರುವ ಉಪ ಕೇಂದ್ರವನ್ನು ಉನ್ನತೀಕರಣಗೊಳಿಸುವ ಪ್ರಸ್ತಾವನೆಗಳು ಇದ್ದು. ಅವುಗಳ ವಿವರಗಳು ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಸ್ಥಳ	ಸಾಮರ್ಥ್ಯ
1.	ಸಂತಪುರದಲ್ಲಿ ಹಾಲಿ ಇರುವ 33 ಕೆ.ವಿ. ವಿದ್ಯುತ್ ಉಪ ಕೇಂದ್ರವನ್ನು 110 ಕೆ.ವಿ.ಗೆ ಉನ್ನತೀಕರಣಗೊಳಿಸುವುದು.	10 ಎಂ.ವಿ.ಎ. 110x11 ಕೆ.ವಿ. ಮತ್ತು 1x20 ಎಂ.ವಿ.ಎ. 110/33ರರ ಕೆ.ವಿ.
2.	ಲಾಧ	2x10 ಎಂ.ವಿ.ಎ 110/11 ಕೆ.ವಿ.
3.	ಖೇರ್ಡಾ (ಬಿ)	2x5 ಎಂ.ವಿ.ಎ. 33/11ಕೆ.ವಿ.

ಈ) ಈ ಪೈಕಿ, ಸಂತಪುರದಲ್ಲಿ ಹಾಲಿ ಇರುವ 33 ಕೆ.ವಿ. ವಿದ್ಯುತ್ ಉಪ ಕೇಂದ್ರವನ್ನು 110 ಕೆ.ವಿ. ಉಪ ಕೇಂದ್ರವನ್ನಾಗಿ ಉನ್ನತೀಕರಣಗೊಳಿಸುವ ಕಾರ್ಯವು ಪ್ರಗತಿಯಲ್ಲಿದೆ.

ಉ) ಸಂತಪುರದ 33 ಕೆ.ವಿ. ವಿದ್ಯುತ್ ಉಪ ಕೇಂದ್ರವನ್ನು 110 ಕೆ.ವಿ. ಗೆ ಉನ್ನತೀ ಕರಣಗೊಳಿಸುವ ಕಾರ್ಯವು ಪ್ರಗತಿಯಲ್ಲಿದ್ದು. ಅಕ್ಟೋಬರ್ 2004ರ ಅಂತ್ಯದ ವೇಳೆಗೆ ಇದು ಪೂರ್ಣಗೊಳ್ಳುವ ನಿರೀಕ್ಷೆ ಇದೆ. ಪ್ರಸ್ತುತ ಈ ತಾಲ್ಲೂಕಿನ ಕಮಲನಗರ ಮತ್ತು ಔರಾದ್‌ಗಳಲ್ಲಿರುವ 33 ಕೆ.ವಿ. ವಿದ್ಯುತ್ ಉಪ ಕೇಂದ್ರಗಳಿಗೆ ಭಾಲ್ಕಿಯಲ್ಲಿರುವ 110 ಕೆ.ವಿ. ವಿದ್ಯುತ್ ಉಪ ಕೇಂದ್ರದಿಂದ ವಿದ್ಯುತ್ ಸರಬರಾಜಾಗುತ್ತಿದೆ. ಸಂತಪುರದಲ್ಲಿ 110 ಕೆ.ವಿ.ಗೆ ಉನ್ನತೀಕರಣಗೊಂಡ ವಿದ್ಯುತ್ ಉಪ ಕೇಂದ್ರವು ಕಾರ್ಯಾರಂಭ ಮಾಡಿದ ನಂತರ ಸದರೀ ವಿದ್ಯುತ್ ಉಪ ಕೇಂದ್ರದಿಂದಲೇ ಕಮಲನಗರ ಮತ್ತು ಔರಾದ್‌ಗಳಲ್ಲಿರುವ 33 ಕೆ.ವಿ. ವಿದ್ಯುತ್ ಉಪ ಕೇಂದ್ರಗಳಿಗೆ ವಿದ್ಯುತ್ ಸರಬರಾಜನ್ನು ವ್ಯವಸ್ಥೆ ಮಾಡಲಾಗುತ್ತಿದೆ. ಈ ಕ್ರಮದಿಂದಾಗಿ, ಔರಾದ್ ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜಿನ ವೃತ್ಯಯದಲ್ಲಿ ಸಾಕಷ್ಟು ಸುಧಾರಣೆ ಉಂಟಾಗುವುದರ ಜೊತೆ ವೋಲ್ಟೇಜ್ ಗುಣಮಟ್ಟವೂ ಸಹ ಸುಧಾರಣೆಗೊಳ್ಳುತ್ತದೆ.

544(734) : ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯು ಎಷ್ಟು ಕಿ.ಮೀ. ರಸ್ತೆಯನ್ನು ನಿರ್ವಹಣೆ ಮಾಡುತ್ತಿದೆ (ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು);

ಆ) ಕಳೆದ 3 ವರ್ಷಗಳಲ್ಲಿ ಈ ರಸ್ತೆಗಳ ನಿರ್ವಹಣೆಗಾಗಿ ಪ್ರತಿ ವರ್ಷ ಖರ್ಚು ಮಾಡಿದ ಹಣವೆಷ್ಟು (ತಾಲ್ಲೂಕುವಾರು ಅಂಕಿ ಅಂಶಗಳನ್ನು ನೀಡುವುದು);

ಇ) ಜಿಲ್ಲೆಯ ಬಹುತೇಕ ರಸ್ತೆಗಳು ಮುಖ್ಯವಾಗಿ ಅಂತರ ರಾಜ್ಯಕ್ಕೆ ಸಂಪರ್ಕವನ್ನು ಕಲ್ಪಿಸುವ ರಸ್ತೆಗಳು ಶಿಥಿಲಗೊಂಡು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಅಂತಹ ರಸ್ತೆಗಳನ್ನು ದುರಸ್ತಿ ಮಾಡಲು ಸರ್ಕಾರ ಪ್ರಸಕ್ತ ಸಾಲಿನಲ್ಲಿ ಎಷ್ಟು ಯಾವ ಕ್ರಮಗಳನ್ನು ರೂಪಿಸಲಿದೆ;

ಉ) ಪ್ರಸಕ್ತ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ಹೊಸದಾಗಿ ರಸ್ತೆ ನಿರ್ಮಾಣ ಕಾರ್ಯವನ್ನೇನಾದರು ತೆಗೆದುಕೊಳ್ಳಲಾಗುವುದೇ;

ಊ) ಹಾಗಿದ್ದಲ್ಲಿ ಅದರ ವಿವರಗಳೇನು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಬೀದರ್ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯು 937–50 ಕಿಮೀ ಉದ್ದದ ಜಿಲ್ಲಾ ಮುಖ್ಯ ರಸ್ತೆಗಳನ್ನು ಹಾಗೂ 446.00 ಕಿಮೀ ಉದ್ದದ ರಾಜ್ಯ ಹೆದ್ದಾರಿಗಳ ರಸ್ತೆ ನಿರ್ವಹಣೆ ಮಾಡುತ್ತಿದೆ. ತಾಲ್ಲೂಕುವಾರು ವಿವರ ಈ ಕೆಳಗಿನಂತಿದೆ.